**ಕರ್ನಾಟಕ ಸರ್ಕಾರ**

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

2ನೇ ಮಹಡಿ, 3ನೇ ಹಂತ, ಕೊಠಡಿ ಸಂಖ್ಯೆ: 219, ಬಹುಮಹಡಿಗಳ ಕಟ್ಟಡ, ಬೆಂಗಳೂರು– 560 001,

ದೂರವಾಣಿ ಸಂಖ್ಯೆ: 080–22372738 ಈ–ಮೇಲ್ : nrega@karnataka.gov.in


No:RDC-EGS/50/2021(E-442252) ದಿನಾಂಕ:04-03-2021

**ರವರಿಗೆ:**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

**ಮಾನ್ಯರೇ,**

**ವಿಷಯ:** ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಜಿಲ್ಲೆಗಳಲ್ಲಿ ಖಾಲಿ ಇರುವ ತಾಂತ್ರಿಕ ಸಹಾಯಕರು (ಅರಣ್ಯ/ಕೃಷಿ/ತೋಟಗಾರಿಕೆ) ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇರೆಗೆ ಸಿಬ್ಬಂದಿಗಳನ್ನು ನೇಮಕಾತಿ ಮಾಡುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಹಾತ್ಮಗಾಂಧಿ ನರೇಗಾ ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲೆಗಳಿಗೆ ತಾಂತ್ರಿಕ ಸಹಾಯಕರು (ಅರಣ್ಯ/ಕೃಷಿ/ತೋಟಗಾರಿಕೆ) ಹುದ್ದೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಸೇವೆಗೆ ಪಡೆಯಲು ಮಂಜೂರಾತಿ ನೀಡಲಾಗಿತ್ತು. ಆದರೆ, ಜಿಲ್ಲೆಗಳಿಗೆ ಮಂಜೂರು ಮಾಡಲಾಗಿರುವ ಹುದ್ದೆಗಳಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇದ್ದು, ಇದರಿಂದ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಅಡಚಣೆಯಾಗಿರುತ್ತದೆ. ಆದ್ದರಿಂದ ಮಂಜೂರಾದ ಹುದ್ದೆಗಳ ಪೈಕಿ ಖಾಲಿ ಇರುವ ತಾಂತ್ರಿಕ ಸಹಾಯಕರು (ಅರಣ್ಯ/ಕೃಷಿ/ತೋಟಗಾರಿಕೆ) ಹುದ್ದೆಗಳಿಗೆ ಜಿಲ್ಲಾ ಹಂತದಲ್ಲಿಯೇ ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದ್ದು, ನೇಮಕಾತಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿದೆ.

1. ಖಾಲಿ ಇರುವ ತಾಂತ್ರಿಕ ಸಹಾಯಕರು (ಅರಣ್ಯ/ಕೃಷಿ/ತೋಟಗಾರಿಕೆ) ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆ ಹೊರಡಿಸತಕ್ಕದ್ದು.
2. ನೇಮಕಾತಿ ಪ್ರಕಟಣೆಯನ್ನು ಕನಿಷ್ಠ ಒಂದು ರಾಜ್ಯ ಮಟ್ಟದ ಮತ್ತು ಒಂದು ಜಿಲ್ಲಾ ಮಟ್ಟದ ಪತ್ರಿಕೆಗಳಲ್ಲಿ ಪ್ರಕಟಿಸುವುದು.
3. ತಾಂತ್ರಿಕ ಸಹಾಯಕರು (ಅರಣ್ಯ/ಕೃಷಿ/ತೋಟಗಾರಿಕೆ) ಹುದ್ದೆಗಳಿಗೆ ಈ ಕೆಳಗಿನಂತೆ ವಿದ್ಯಾರ್ಹತೆ, ವಯೋಮಿತಿ ಮತ್ತು ಮಾಸಿಕ ಸಂಭಾವನೆಯನ್ನು ನಿಗದಿಪಡಿಸಿದೆ.

| ಕ್ರ.ಸಂ | ಹುದ್ದೆಯ ಹೆಸರು | ಕನಿಷ್ಠ ವಿದ್ಯಾರ್ಹತೆ | ಅಪೇಕ್ಷಣೀಯ | ವಯೋಮಿತಿ | ಮಾಸಿಕ ಸಂಭಾವನೆ |
|---|---|---|---|---|---|
| 1 | ತಾಂತ್ರಿಕ ಸಹಾಯಕರು (ಅರಣ್ಯ) | BSc (Forestry) | MSc (Forestry) ಮತ್ತು ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ ಅನುಭವ | 21–40 ವರ್ಷ | ರೂ.24,000/– (ಪ್ರಯಾಣ ಭತ್ಯೆ ಪ್ರತಿ ಕಿ.ಮೀ.ಗೆ 5ರೂ.ನಂತೆ ಗರಿಷ್ಠ ಮಾಸಿಕ ರೂ.1500/–) |
| 2 | ತಾಂತ್ರಿಕ ಸಹಾಯಕರು (ಕೃಷಿ/ತೋಟಗಾರಿಕೆ) | BSc(Agri), BSc(Horticulture) | MSc (Agri), MSc (Horticulture) ಮತ್ತು ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ ಅನುಭವ | 21–40 ವರ್ಷ | ರೂ.24,000/– (ಪ್ರಯಾಣ ಭತ್ಯೆ ಪ್ರತಿ ಕಿ.ಮೀ.ಗೆ 5ರೂ.ನಂತೆ ಗರಿಷ್ಠ ಮಾಸಿಕ ರೂ.1500/–) |

4.3.21

Scanned with CamScanner

4. ಅರ್ಜಿಗಳನ್ನು ಜಿಲ್ಲಾ ಪಂಚಾಯತಿಯಲ್ಲಿ ಸ್ವೀಕರಿಸುವುದು ಮತ್ತು ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಸ್ವೀಕೃತಿ ನೀಡುವುದು.

5. ಜಿಲ್ಲಾ ಪಂಚಾಯತಿಗಳು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆಗೆ ಸಲ್ಲಿಸಲಾದ ಅರ್ಜಿಗಳ ವಿವರಗಳನ್ನು ಪರಿಶೀಲಿಸಿ ಮೆರಿಟ್ ಆಧಾರದಲ್ಲಿ ಅಭ್ಯರ್ಥಿಗಳನ್ನು ಹೆಚ್ಚು ಅಂಕದಿಂದ ಕಡಿಮೆ ಅಂಕದ ಆಧಾರದಲ್ಲಿ (Highest to Lowest order of Merit) ಪಟ್ಟಿ ತಯಾರಿಸಿಕೊಳ್ಳತಕ್ಕದ್ದು.

6. ಅಭ್ಯರ್ಥಿಗಳ ಪಟ್ಟಿ ತಯಾರಿಸಿದ ನಂತರ ದಾಖಲಾತಿ ಪರಿಶೀಲನೆಗೆ ಅಭ್ಯರ್ಥಿಗಳನ್ನು ಕರೆದು ಜಿಲ್ಲಾ ಪಂಚಾಯತಿ ತಂಡದಿಂದ ದಾಖಲಾತಿ ಪರಿಶೀಲನೆ ಕೈಗೊಳ್ಳತಕ್ಕದ್ದು. ದಾಖಲಾತಿ ಪರಿಶೀಲನೆ ನಡೆಸಲು ಉಪ ಕಾರ್ಯದರ್ಶಿ ನೇತೃತ್ವದ ತಂಡವನ್ನು ರಚಿಸುವುದು. ದಾಖಲಾತಿ ಪರಿಶೀಲನಾ ದಿನಾಂಕವನ್ನು ಅಭ್ಯರ್ಥಿಗಳಿಗೆ ಇ-ಮೇಲ್ ಮತ್ತು ನೋಟೀಸ್ ಮೂಲಕ ತಿಳಿಸುವುದು. ದಾಖಲಾತಿ ಪರಿಶೀಲನಾ ದಿನದಂದು ಅಭ್ಯರ್ಥಿಗಳು ಹಾಜರಾಗದಿದ್ದಲ್ಲಿ ಯಾವುದೇ ಕಾರಣಕ್ಕೂ ಅವರನ್ನು ಆಯ್ಕೆಗೆ ಪರಿಗಣಿಸಬಾರದು.

7. ದಾಖಲಾತಿ ಪರಿಶೀಲನೆ ನಂತರ ಅರ್ಹ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲು ನಿಗದಿಪಡಿಸಿದ ವಿದ್ಯಾರ್ಹತೆ ಮತ್ತು ಅನುಭವವನ್ನು ಪರಿಗಣಿಸಿ ಈ ಕೆಳಕಂಡ ಮಾನದಂಡದಲ್ಲಿ ಮೆರಿಟ್ ಪಟ್ಟಿ ತಯಾರಿಸುವುದು.

   1) ಕನಿಷ್ಠ ವಿದ್ಯಾರ್ಹತೆಯಾದ ಪದವಿ ವಿದ್ಯಾರ್ಹತೆಗೆ – 60 ಅಂಕಗಳು (ಉದಾಹರಣೆಗೆ ಪದವಿಯಲ್ಲಿ ಶೇಕಡ 70 ಅಂಕಗಳನ್ನು ಪಡೆದಿದ್ದಲ್ಲಿ ಆ ಅಭ್ಯರ್ಥಿಗೆ 70 x 0.60= 42 ಅಂಕಗಳನ್ನು ನೀಡುವುದು.)

   2) ಸ್ನಾತಕೋತ್ತರ ಪದವಿ ವಿದ್ಯಾರ್ಹತೆಗೆ – 20 ಅಂಕಗಳು (ಉದಾಹರಣೆಗೆ ಸ್ನಾತಕೋತ್ತರ ಪದವಿಯಲ್ಲಿ ಶೇಕಡ 70 ಅಂಕಗಳನ್ನು ಪಡೆದಿದ್ದಲ್ಲಿ ಆ ಅಭ್ಯರ್ಥಿಗೆ 70 x 0.20= 14 ಅಂಕಗಳನ್ನು ನೀಡುವುದು.)

   3) ಸಂಬಂಧಿಸಿದ ಕಾರ್ಯ ಕ್ಷೇತ್ರದಲ್ಲಿ 36 ತಿಂಗಳ ಅಥವಾ ಅದಕ್ಕಿಂತ ಹೆಚ್ಚಿನ ಕಾರ್ಯಾನುಭವಕ್ಕಾಗಿ (Experience) – 20 ಅಂಕಗಳು (ಅಂದರೆ ಒಂದು ತಿಂಗಳ ಕಾರ್ಯಾನುಭವಕ್ಕಾಗಿ 0.56 ಅಂಕಗಳು) (ಉದಾಹರಣೆಗೆ 10 ತಿಂಗಳ ಅನುಭವ ಹೊಂದಿದ್ದಲ್ಲಿ 10 x 0.56 = 5.60 ಅಂಕಗಳನ್ನು ನೀಡುವುದು.)

   4) ಒಟ್ಟು ಅಂಕಗಳು 100 ಅಂಕಗಳು.

8. ಮೇಲಿನಂತೆ ಮೆರಿಟ್ ಪಟ್ಟಿ ತಯಾರಿಸಿ ಜಿಲ್ಲಾ ಪಂಚಾಯತಿಯಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶ ನೀಡುವುದು. ನಂತರ ಅಂತಿಮ ಮೆರಿಟ್ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಜಿಲ್ಲೆಯ ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ಹೊರಗುತ್ತಿಗೆ ಆಧಾರದಲ್ಲಿ ಸೇವೆಗೆ ಪಡೆಯಲು ಕ್ರಮವಹಿಸುವುದು.

4.3.24

9. ಒಂದು ವೇಳೆ ಮೆರಿಟ್ ಆಧಾರದ ಮೇರೆಗೆ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸುವುದು ಮತ್ತು ಮೆರಿಟ್ ಆಧಾರದ ಪ್ರತೀಕ್ಷಾ ಪಟ್ಟಿಯಲ್ಲಿರುವ (Waiting List) ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸುವುದು.

10. ನೇಮಕಾತಿಯಾದ ಅಭ್ಯರ್ಥಿಗಳು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ನೇಮಿಸಿದ ಸ್ಥಳದಲ್ಲಿ ಕಾರ್ಯ ನಿರ್ವಹಿಸತಕ್ಕದ್ದು.

11. ನೇಮಕಾತಿ ಅವಧಿಯು 11 ತಿಂಗಳಾಗಿದ್ದು, ಇವರ ಕಾರ್ಯಕ್ಷಮತೆ ಪರಿಶೀಲಿಸಿ ಮುಂದುವರೆಸುವ ಬಗ್ಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ತೀರ್ಮಾನ ಕೈಗೊಳ್ಳುವುದು.

12. ಅಭ್ಯರ್ಥಿಗಳು ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ, ಕನ್ನಡ ಮತ್ತು ಇಂಗ್ಲೀಷ್ ಭಾಷೆ ತಿಳಿದಿರಬೇಕು.

13. ನೇಮಕಗೊಂಡ ಹೊರಗುತ್ತಿಗೆ ಸಿಬ್ಬಂದಿಯು ವಾರ್ಷಿಕ 12 ದಿನಗಳ ಸಾಂದರ್ಭಿಕ ರಜೆ ಪಡೆಯಬಹುದು.

14. ಮಹಿಳೆಯರು Maternity Benefit Act 1961ರಡಿಯಲ್ಲಿ ಹೆರಿಗೆ ರಜೆ ಪಡೆಯಲು ಅರ್ಹರಾಗಿರುತ್ತಾರೆ.

Scanned with CamScanner

15. ನೇಮಕಾತಿಗೆ ಯಾವುದೇ ನೇರ ಸಂದರ್ಶನ ಅಥವಾ ಲಿಖಿತ ಪರೀಕ್ಷೆ ನಡೆಸತಕ್ಕದ್ದಲ್ಲ.

16. ತಾಂತ್ರಿಕ ಸಹಾಯಕರ ಹುದ್ದೆಗಳ ನೇಮಕಾತಿಗೆ ಈ ಕೆಳಗಿನಂತೆ ವೇಳಾಪಟ್ಟಿ ನಿಗದಿಪಡಿಸಿದೆ.

| ಕ್ರಸಂ | ತಾಂತ್ರಿಕ ಸಹಾಯಕರ ಆಯ್ಕೆಯ ಹಂತ | ದಿನಾಂಕ |
|---|---|---|
| 01 | ತಾಂತ್ರಿಕ ಸಹಾಯಕರನ್ನು ನೇಮಕಾತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಪತ್ರಿಕಾ ಪ್ರಕಟಣೆ ಹೊರಡಿಸಲು ಕೊನೆಯ ದಿನಾಂಕ | 10-03-2021 |
| 02 | ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 25-03-2021 |
| 03 | ಅಭ್ಯರ್ಥಿಗಳ ದಾಖಲಾತಿಗಳ ಪರಿಶೀಲನೆ ನಡೆಸುವುದು ಮತ್ತು ನಿಗದಿತ ಮಾನದಂಡಗಳಂತೆ ತಾತ್ಕಾಲಿಕ ಮೆರಿಟ್ ಪಟ್ಟಿ ತಯಾರಿಸಿ ಪ್ರಕಟಿಸುವುದು. | 30-03-2021 |
| 04 | ತಾತ್ಕಾಲಿಕ ಮೆರಿಟ್ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ | 06-04-2021 |
| 05 | ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವುದು | 07-04-2021 |
| 06 | ಆಯ್ಕೆಯಾದ ಅಭ್ಯರ್ಥಿಗಳನ್ನು ಹೊರಗುತ್ತಿಗೆ ಮಾನವ ಸಂಪನ್ಮೂಲ ಸಂಸ್ಥೆ ಮೂಲಕ ಸೇವೆಗೆ ಪಡೆಯುವುದು. | 10-04-2021 |

ತಮ್ಮ ವಿಶ್ವಾಸಿ,

A.3.21

ಆಯುಕ್ತರು, ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

Scanned with CamScanner

## Technical Assistants Details as on 04.03.2021

| Sl.No | District | No.of Blocks | No.of GPs | TA(Agriculture) | | | TA(Horticulture) | | | TA(Forestry) | | |
|---|---|---|---|---|---|---|---|---|---|---|---|---|
| | | | | Sanctioned | Working | Vacant | Sanctioned | Working | Vacant | Sanctioned | Working | Vacant |
| 1 | BAGALKOTE | 9 | 198 | 22 | 12 | 10 | 8 | 3 | 5 | 7 | 6 | 1 |
| 2 | BALLARI | 11 | 237 | 19 | 11 | 8 | 18 | 11 | 7 | 8 | 5 | 3 |
| 3 | BELAGAVI | 14 | 506 | 32 | 31 | 1 | 19 | 18 | 1 | 14 | 11 | 3 |
| 4 | BENGALURU | 5 | 93 | 0 | 0 | 0 | 1 | 0 | 1 | 1 | 0 | 1 |
| 5 | BENGALURU RURAL | 4 | 105 | 3 | 2 | 1 | 2 | 1 | 1 | 2 | 2 | 0 |
| 6 | BIDAR | 8 | 185 | 16 | 12 | 4 | 8 | 3 | 5 | 5 | 5 | 0 |
| 7 | CHAMARAJA NAGARA | 5 | 130 | 10 | 4 | 6 | 7 | 4 | 3 | 3 | 1 | 2 |
| 8 | CHIKKABALLAPURA | 6 | 157 | 19 | 19 | 0 | 10 | 5 | 5 | 3 | 2 | 1 |
| 9 | CHIKKAMAGALURU | 8 | 227 | 11 | 11 | 0 | 8 | 8 | 0 | 4 | 4 | 0 |
| 10 | CHITRADURGA | 6 | 189 | 11 | 11 | 0 | 12 | 7 | 5 | 4 | 3 | 1 |
| 11 | DAKSHINA KANNADA | 7 | 229 | 9 | 9 | 0 | 6 | 6 | 0 | 2 | 2 | 0 |
| 12 | DAVANAGERE | 6 | 196 | 14 | 13 | 1 | 5 | 2 | 3 | 3 | 4 | -1 |
| 13 | DHARWAR | 7 | 144 | 15 | 15 | 0 | 3 | 3 | 0 | 3 | 1 | 2 |
| 14 | GADAG | 7 | 122 | 8 | 8 | 0 | 7 | 5 | 2 | 4 | 3 | 1 |
| 15 | HASSAN | 8 | 267 | 17 | 13 | 4 | 10 | 10 | 0 | 4 | 5 | -1 |
| 16 | HAVERI | 8 | 224 | 10 | 7 | 3 | 10 | 8 | 2 | 3 | 2 | 1 |
| 17 | KALABURAGI | 11 | 264 | 9 | 7 | 2 | 0 | 0 | 0 | 6 | 4 | 2 |
| 18 | KODAGU | 3 | 104 | 0 | 0 | 0 | 2 | 0 | 2 | 2 | 1 | 1 |
| 19 | KOLAR | 6 | 156 | 16 | 16 | 0 | 19 | 16 | 3 | 4 | 3 | 1 |
| 20 | KOPPAL | 7 | 153 | 9 | 6 | 3 | 9 | 9 | 0 | 3 | 1 | 2 |
| 21 | MANDYA | 7 | 233 | 4 | 3 | 1 | 4 | 4 | 0 | 4 | 2 | 2 |
| 22 | MYSURU | 8 | 266 | 7 | 2 | 5 | 3 | 1 | 2 | 2 | 1 | 1 |
| 23 | RAICHUR | 7 | 179 | 8 | 5 | 3 | 5 | 3 | 2 | 5 | 2 | 3 |
| 24 | RAMANAGARA | 4 | 127 | 14 | 7 | 7 | 6 | 6 | 0 | 4 | 2 | 2 |
| 25 | SHIVAMOGGA | 7 | 271 | 7 | 5 | 2 | 7 | 6 | 1 | 4 | 2 | 2 |
| 26 | TUMAKURU | 10 | 330 | 30 | 19 | 11 | 10 | 8 | 2 | 5 | 2 | 3 |
| 27 | UDUPI | 7 | 158 | 0 | 0 | 0 | 3 | 2 | 1 | 2 | 1 | 1 |
| 28 | UTTARA KANNADA | 12 | 231 | 6 | 3 | 3 | 5 | 0 | 5 | 8 | 1 | 7 |
| 29 | VIJAYPURA | 12 | 214 | 17 | 16 | 1 | 7 | 5 | 2 | 5 | 3 | 2 |
| 30 | YADGIR | 6 | 123 | 15 | 9 | 6 | 3 | 1 | 2 | 2 | 0 | 2 |
| Total | | 226 | 6018 | 358 | 276 | 82 | 217 | 155 | 62 | 126 | 81 | 45 |

Scanned with CamScanner